## 2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 44

# ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ, 1999

## ಪ್ರಕರಣಗಳ ಪಟ್ಟಿ

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಬಾವಿ ತೋಡುವುದಕ್ಕೆ ಅನುಮತಿ ಇತ್ಯಾದಿ
4. ನೀರಿನ ಕೊರತೆಯಿರುವ ಪ್ರದೇಶವೆಂಬುದಾಗಿ ಘೋಷಿಸುವುದು
5. ನೀರಿನ ಕೊರತೆಯಿರುವ ಪ್ರದೇಶದಲ್ಲಿ ಬಾವಿಗಳಿಂದ ನೀರು ತೆಗೆಯುವುದನ್ನು ನಿಯಂತ್ರಿಸುವುದು
6. ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶ ಎಂದು ಘೋಷಿಸುವುದು
7. ಅತ್ಯಧಿಕವಾಗಿ ಬಳಸಲಾದ ಜಲ ವಿಭಾಜಕ ಪ್ರದೇಶದಲ್ಲಿ ಬಾವಿ ತೋಡಲು ನಿಷೇಧ
8. ನಿಶ್ಚಿತ ಅವಧಿಯವರೆಗೆ ಈಗಿರುವ ಬಾವಿಯಿಂದ ನೀರನ್ನು ತೆಗೆಯುವುದಕ್ಕೆ ನಿಷೇಧ
9. ಈಗಿರುವ ಬಾವಿಯನ್ನು ಮುಚ್ಚುವುದು
10. ಮಾಹಿತಿ ಪಡೆದುಕೊಳ್ಳುವುದಕ್ಕಾಗಿ ಯಾವುದೇ ಭೂಮಿಯನ್ನು ಪ್ರವೇಶಿಸಲು ಅಧಿಕಾರ
11. 3, 5, 7, 8 ಅಥವಾ 9ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಯನ್ನು ನಿಲ್ಲಿಸಲು ಅಧಿಕಾರ
12. ಪರಿಹಾರ ಸಂದಾಯ
13. ಪರಿಹಾರ ಕ್ಲೇಮು ಮಾಡುವುದಕ್ಕೆ ಪ್ರತಿಬಂಧ
14. ಅಪೀಲುಗಳು
15. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

16. ದಂಡನೆ
17. ಕಂಪನಿಗಳಿಂದ ಅಪರಾಧಗಳು
18. ಅಧಿನಿಯಮದ ಅಧ್ಯಾರೋಹಿ ಪ್ರಭಾವ
19. ನೋಟೀಸು ಇತ್ಯಾದಿಯನ್ನು ಜಾರಿಗೊಳಿಸುವ ವಿಧಾನ
20. ನಿಯಮ ರಚನಾಧಿಕಾರ
21. ತೊಂದರೆಗಳನ್ನು ನಿವಾರಿಸುವ ಅಧಿಕಾರ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಾರತ ಸರ್ಕಾರವು 1990-91ನೇ ವರ್ಷದಲ್ಲಿ, ಅಂತರ್ಜಲವನ್ನು ತೆಗೆಯುವುದನ್ನು ನಿಯಂತ್ರಿಸುವುದಕ್ಕೆ ಮಾದರಿ ವಿಧೇಯಕವೊಂದನ್ನು ಪರಿಚಲಿಸಿತು. ಅಂದಿನಿಂದಲೂ ಕೇಂದ್ರ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮೂಲಗಳನ್ನು ಸಂರಕ್ಷಿಸಲು ನಿಯಂತ್ರಕ ಕ್ರಮಗಳನ್ನು ರೂಪಿಸಿ ಜಾರಿಗೊಳಿಸಲು ಒಂದು ಸೂಕ್ತ ಶಾಸನವನ್ನು ಹೊರಡಿಸುವಂತೆ ರಾಜ್ಯ ಸರ್ಕಾರವನ್ನು ಪದೇ ಪದೇ ಒತ್ತಾಯಿಸುತ್ತಾ ಬಂದಿದೆ. ಮಹಾರಾಷ್ಟ್ರ ಸರ್ಕಾರ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಅಂತರ್ಜಲ (ಕುಡಿಯುವ ನೀರಿನ ಉದ್ದೇಶಗಳಿಗಾಗಿ ನಿಯಂತ್ರಣ) ಅಧಿನಿಯಮವನ್ನು ಕ್ರಮವಾಗಿ 1993 ಮತ್ತು 1996 ರಲ್ಲಿ ಜಾರಿಗೊಳಿಸಿದವು.

ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ, 1999ನ್ನು ಈ ಮುಂದೆ ವಿವರಿಸಲಾದ ಹಲವಾರು ನಿಯಂತ್ರಕ ಕ್ರಮಗಳೊಂದಿಗೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

(i) ಯುಕ್ತ ಪ್ರಾಧಿಕಾರದ ಅನುಮತಿ ಪಡೆಯದೆ ಒಂದು ಸಾರ್ವಜನಿಕ ಕುಡಿಯುವ ನೀರಿನ ಮೂಲದಿಂದ ಐದುನೂರು ಮೀಟರುಗಳ ದೂರ ದೊಳಗೆ ನೀರನ್ನು ತೆಗೆಯುವ ಅಥವಾ ಸೇದುವ ಉದ್ದೇಶಕ್ಕಾಗಿ ಬಾವಿ ತೋಡುವುದನ್ನು ನಿಷೇಧಿಸಲಾಗಿದೆ.

(ii) ಯುಕ್ತ ಪ್ರಾಧಿಕಾರವು, ನೀರಿನ ಕೊರತೆ ಉಂಟಾದ ಸಂದರ್ಭದಲ್ಲಿ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಗಾಗಿ ಆ ಪ್ರದೇಶವನ್ನು

ನೀರಿನ ಕೊರತೆ ಇರುವ ಪ್ರದೇಶವೆಂಬುದಾಗಿ ಘೋಷಿಸಬಹುದು, ಆದರೆ ಆ ಅವಧಿಯು ಒಂದು ಬಾರಿಗೆ ಒಂದು ವರ್ಷವನ್ನು ಮೀರಬಾರದು.

(iii) ಯಾವುದೇ ಪ್ರದೇಶವನ್ನು ನೀರಿನ ಕೊರತೆ ಇರುವ ಪ್ರದೇಶವೆಂಬುದಾಗಿ ಘೋಷಿಸಿದ ತರುವಾಯ, ಯುಕ್ತ ಪ್ರಾಧಿಕಾರವು ಅಂಥ ಯಾವುದೇ ಬಾವಿಯು ಸಾರ್ವಜನಿಕ ಕುಡಿಯುವ ನೀರಿನ ಮೂಲದಿಂದ ಐದುನೂರು ಮೀಟರುಗಳ ವ್ಯಾಪ್ತಿಯೊಳಗೆ ಇದ್ದರೆ ಯಾವುದೇ ಉದ್ದೇಶಕ್ಕಾಗಿ ಅದರಿಂದ ನೀರು ತೆಗೆಯುವುದನ್ನು ನಿರ್ಬಂಧಿಸುವ ಅಥವಾ ನಿಷೇಧಿಸುವ ಆದೇಶವನ್ನು ಹೊರಡಿಸಬಹುದು.

(iv) ಯುಕ್ತ ಪ್ರಾಧಿಕಾರವು, ತಾಂತ್ರಿಕ ಅಧಿಕಾರಿಯ ಸಲಹೆಯ ಮೇರೆಗೆ ಒಂದು ಜಲವಿಭಾಜಕ ಪ್ರದೇಶವನ್ನು ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶ ಎಂದು ಘೋಷಿಸಬಹುದು.

(v) ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶದಲ್ಲಿ ಬಾವಿ ತೋಡುವುದನ್ನು ನಿಷೇಧಿಸುವ ಅಧಿಕಾರವನ್ನು ಯುಕ್ತ ಪ್ರಾಧಿಕಾರವು ಹೊಂದಿರತಕ್ಕದ್ದು.

(vi) ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶದಲ್ಲಿ ಈಗಿರುವ ಯಾವುದೇ ಬಾವಿಯು ಯಾವುದೇ ಸಾರ್ವಜನಿಕ ಕುಡಿಯುವ ನೀರಿನ ಮೂಲದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆಯೆಂದು ಯುಕ್ತ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ಪ್ರತಿವರ್ಷ ಫೆಬ್ರವರಿಯಿಂದ ಜುಲೈ ವರೆಗಿನ ಅವಧಿಯಲ್ಲಿ ಅಂಥ ಬಾವಿಯಿಂದ ನೀರು ತೆಗೆಯುವುದನ್ನು ನಿಷೇಧಿಸಬಹುದು ಮತ್ತು ಇತರ ಆನುಷಂಗಿಕ ವಿಷಯಗಳು.

ಆದ್ದರಿಂದ ಈ ವಿಧೇಯಕ.

(1999ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 6)

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 17 ಮತ್ತು 18ನೇ ನಮೂದು)

**2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 44**

*(2003 ರ ಅಕ್ಟೋಬರ್ 27 ನೇ ದಿನಾಂಕದಂದು ಕನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ, 1999

*(2003 ರ ಅಕ್ಟೋಬರ್ 17 ನೇ ದಿನಾಂಕದಂದು ರಾಷ್ಟ್ರಪತಿಗಳ ಅನುಮೋದನೆಯನ್ನು ಪಡೆಯಲಾಗಿದೆ)*

ಸಾರ್ವಜನಿಕ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ಅಂತರ್ಜಲದ ಬಳಕೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಆನುಷಂಗಿಕವಾದ ವಿಷಯಗಳನ್ನು ನಿಯಂತ್ರಿಸಲು ಒಂದು ಅಧಿನಿಯಮ.

ಸಾರ್ವಜನಿಕ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ಅಂತರ್ಜಲದ ಬಳಕೆಯನ್ನು ನಿಯಂತ್ರಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

## ಅಧ್ಯಾಯ - I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸತಕ್ಕದ್ದು.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸ ಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಸ್ಥಳೀಯ ಪ್ರದೇಶಗಳಿಗೆ ಅಥವಾ ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

---

ಕರ್ನಾಟಕ ರಾಜ್ಯ ಪತ್ರದ ಭಾಗIVಎ ವಿಶೇಷ ಪತ್ರಿಕೆ ಸಂಖ್ಯೆ: 1270 ದಿನಾಂಕ: 27.9.2003 ರಲ್ಲಿ ಪ್ರಕಟಿತ
ಕಡತ ಸಂಖ್ಯೆ: ಸಂವ್ಯಶಾಇ 20 ಶಾಸನ 2003

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,-

(1) "ಯುಕ್ತ ಪ್ರಾಧಿಕಾರ" ಎಂದರೆ, ಡೆಪ್ಯುಟಿ ಕಮೀಷನರು ಮತ್ತು ಇದು ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ, ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ಅಸಿಸ್ಟೆಂಟ್ ಕಮೀಷನರ ದರ್ಜೆಗೆ ಕಡಿಮೆಯಲ್ಲದ ಯಾವೊಬ್ಬ ಅಧಿಕಾರಿಯನ್ನು ಒಳಗೊಳ್ಳುತ್ತದೆ ಮತ್ತು ರಾಜ್ಯದ ಬೇರೆ ಬೇರೆ ಸ್ಥಳೀಯ ಪ್ರದೇಶಗಳಿಗೆ ಬೇರೆ ಬೇರೆ ಅಧಿಕಾರಿಗಳನ್ನು ಗೊತ್ತುಪಡಿಸಬಹುದು;

(2) "ಕುಡಿಯುವ ನೀರಿನ ಉದ್ದೇಶ" ಎಂದರೆ, ಕುಡಿಯುವುದಕ್ಕೆ ಮತ್ತು ಇತರ ಗೃಹಕೃತ್ಯ ಉದ್ದೇಶಗಳಿಗೆ ಜನರು ನೀರನ್ನು ಬಳಸುವುದು ಅಥವಾ ಉಪಯೋಗಿಸುವುದು ಮತ್ತು ಇದು ಜಾನುವಾರುಗಳ ಸಲುವಾಗಿ ಅಂಥಹವೇ ಸುಸಂಗತ ಉದ್ದೇಶಗಳಿಗೆ ನೀರು ಬಳಸುವುದನ್ನು ಒಳಗೊಳ್ಳುತ್ತದೆ;

**ವಿವರಣೆ.-** ಈ ಖಂಡದ ಉದ್ದೇಶಗಳಿಗಾಗಿ "ಗೃಹಕೃತ್ಯ ಉದ್ದೇಶಗಳು" ಎಂಬ ಪದಗಳು ಅಡುಗೆಗೆ, ಸ್ನಾನಕ್ಕೆ, ತೊಳೆಯುವುದಕ್ಕೆ, ಸ್ವಚ್ಛಗೊಳಿಸುವುದಕ್ಕೆ ಮತ್ತು ಇತರ ದೈನಂದಿನ ಚಟುವಟಿಕೆಗಳಿಗೆ ನೀರು ಬಳಸುವುದನ್ನು ಅಥವಾ ಉಪಯೋಗಿಸುವುದನ್ನು ಒಳಗೊಳ್ಳತಕ್ಕದ್ದು.

(3) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ,

(4) "ಅಂತರ್ಜಲ" ಎಂದರೆ, ಯಾವುದೇ ನಿರ್ದಿಷ್ಟ ಸ್ಥಳದಲ್ಲಿ ಭೂಗರ್ಭದ ಸ್ವರೂಪ ಹೇಗೇ ಇದ್ದರೂ, ಭೂಮಿಯ ಮೇಲ್ಮೈ ಮಟ್ಟದಿಂದ ಕೆಳಗಿನ ಜಲವಾಹಕದಲ್ಲಿ ನಿಂತಿರುವ ಅಥವಾ ಹರಿಯುತ್ತಿರುವ ನೀರು ಮತ್ತು ಇದು ಎಲ್ಲ ಅಂತರ್ಜಲ ಜಲಾಶಯಗಳನ್ನು ಒಳಗೊಳ್ಳುತ್ತದೆ;

(5) "ಸ್ಥಳೀಯ ಪ್ರಾಧಿಕಾರ" ಎಂಬುದರಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಪೌರನಿಗಮ, ಪುರಸಭೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಕೈಗಾರಿಕಾ ಟೌನ್‌ಶಿಪ್, ಸುಧಾರಣಾ ಮಂಡಲಿ, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ಮಂಡಲಿ, ಇವುಗಳನ್ನು ಒಳಗೊಳ್ಳುತ್ತದೆ;

(6) "ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶ" ಎಂದರೆ, ನಿಯಮಿಸಲಾದ ವಿಧಾನದಲ್ಲಿ ಲೆಕ್ಕ ಹಾಕಲಾದಂತೆ ವರ್ಷದಲ್ಲಿ ತೆಗೆಯಲಾದ ಅಂದಾಜು ಅಂತರ್ಜಲ ಪ್ರಮಾಣವು ವರ್ಷಕ್ಕೆ ಪುನಃ ತುಂಬುವ ಅಂತರ್ಜಲದ ಸರಾಸರಿ ಅಂದಾಜು ಪ್ರಮಾಣದ ಶೇಕಡ ಎಂಭತ್ತೈದಕ್ಕಿಂತ ಹೆಚ್ಚಾಗಿರುವ ಮತ್ತು 6ನೇ ಪ್ರಕರಣದ ಅಡಿಯಲ್ಲಿ ಹಾಗೆಂದು ಘೋಷಿಸಲಾದ ಜಲ ವಿಭಾಜಕ ಪ್ರದೇಶ;

(7) "ಸಾರ್ವಜನಿಕ ಕುಡಿಯುವ ನೀರಿನ ಮೂಲ" ಎಂದರೆ, ಸರ್ಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಪ್ರಾಧಿಕಾರವು ಸಾರ್ವಜನಿಕರಿಗೆ ಯಾವುದರಿಂದ ನೀರು ಒದಗಿಸುವುದೋ ಆ ಬಾವಿ ಮತ್ತು ಇದು ಯುಕ್ತ ಪ್ರಾಧಿಕಾರವು ಅಧಿಸೂಚಿಸಬಹುದಾದ ಅಂಥ ಸ್ಥಳ ಅಥವಾ ಇತರ ಯಾವುದೇ ಕುಡಿಯುವ ನೀರಿನ ಮೂಲಗಳನ್ನು ಒಳಗೊಳ್ಳುತ್ತದೆ;

(8) "ಸಾರ್ವಜನಿಕ ನೀರು ಸರಬರಾಜು ವ್ಯವಸ್ಥೆ" ಎಂದರೆ, ನೀರನ್ನು ಸಾಗಿಸುವ ಪೈಪ್ ಲೈನುಗಳು, ನೀರು ಸಂಗ್ರಹಿಸುವ ಜಲಾಶಯ, ಸ್ಟ್ಯಾಂಡ್‌ಪೋಸ್ಟ್‌ಗಳು, ಕೈಪಂಪು, ವಿದ್ಯುತ್ ಪಂಪು ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ಯಾವುದರ ಮೂಲಕ ನೀರು ಸರಬರಾಜು ಮಾಡಲಾಗುವುದೋ ಅದಕ್ಕೆ ಸಂಬಂಧಿಸಿದ ಎಲ್ಲ ಇತರ ವಸ್ತುಗಳೂ ಸೇರಿದಂತೆ ಸಾರ್ವಜನಿಕ ಕುಡಿಯುವ ನೀರಿನ ಮೂಲಕ್ಕೆ ಸಂಬಂಧಪಟ್ಟ ರಚನೆಗಳು;

(9) "ಅವಶ್ಯಕವಾದ ನೀರಿನ ಪರಿಮಾಣ" ಎಂದರೆ, ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ತಲಾವಾರು ಸರಬರಾಜಿನ ಆಧಾರದ ಮೇಲೆ ಲೆಕ್ಕ ಹಾಕಲಾದ ನೀರಿನ ಪರಿಮಾಣ;

(10) ಬಾವಿಗೆ ಸಂಬಂಧಪಟ್ಟಂತೆ "ತೋಡುವುದು" ಎಂಬುದು, ವ್ಯಾಕರಣಕ್ಕೆ ಸಂಬಂಧಿಸಿದ ಅದರ ಎಲ್ಲ ವ್ಯತ್ಯಾಸಗಳು ಮತ್ತು ಸಂವಾದಿ ಪದಾವಳಿಗಳೊಂದಿಗೆ ಹೊಸ ಬಾವಿಯನ್ನು ಕೊರೆಯುವುದು, ಕೊಳವೆ ಕೊರೆಯುವುದು ಅಥವಾ ಅಗೆಯುವುದು ಅಥವಾ ಈಗಾಗಲೇ ಇರುವ ಬಾವಿಯನ್ನು ಇನ್ನಷ್ಟು ಆಳ ಮಾಡುವುದನ್ನು ಒಳಗೊಳ್ಳುತ್ತದೆ;

(11) "ತಾಂತ್ರಿಕ ಅಧಿಕಾರಿ" ಎಂದರೆ, ಕರ್ನಾಟಕ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಭೂವಿಜ್ಞಾನಿಯ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿ;

(12) "ನೀರಿನ ಕೊರತೆಯಿರುವ ಪ್ರದೇಶ" ಎಂದರೆ, 4ನೇ ಪ್ರಕರಣದಡಿಯಲ್ಲಿ ಹಾಗೆಂದು ಘೋಷಿಸಲಾದ ಪ್ರದೇಶ;

(13) "ಜಲ ವಿಭಾಜಕ ಪ್ರದೇಶ" ಎಂದರೆ, ಕರ್ನಾಟಕ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಂತರ್ಜಲ ಸಮೀಕ್ಷಾ ವಿಭಾಗದಿಂದ ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಗುರುತಿಸಲಾದಂತೆ ಮತ್ತು ಅಧಿಸೂಚಿಸಲಾದಂತೆ ಸ್ವಾಭಾವಿಕ ಜಲ ವಿಭಾಜಕ ರೇಖೆಯ ಮಿತಿಯೊಳಗಿರುವ ಪ್ರದೇಶ;

(14) "ಬಾವಿ" ಎಂದರೆ ರಾಜ್ಯ ಅಥವಾ ಕೇಂದ್ರ ಸರ್ಕಾರವು ವೈಜ್ಞಾನಿಕ ಸಂಶೋಧನೆಗಳು, ಅನ್ವೇಷಣೆ, ಅಭಿವೃದ್ಧಿ, ವೃದ್ಧಿ, ಸಂರಕ್ಷಣೆ, ರಕ್ಷಣೆ ಅಥವಾ ನಿರ್ವಹಣಾ ಕಾಮಗಾರಿಗಾಗಿ ತೋಡಿದ ಬಾವಿಯ ಹೊರತಾಗಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಅಂತರ್ಜಲ ಶೋಧನೆಗಾಗಿ ಅಥವಾ ಅದನ್ನು ತೆಗೆಯುವುದಕ್ಕಾಗಿ ತೋಡಿದ ಬಾವಿ ಮತ್ತು ಇದು ತೆರೆದ ಬಾವಿ, ತೋಡು ಬಾವಿ, ಕೊರೆ ಬಾವಿ, ತೋಡು ಹಾಗೂ ಕೋರೆ ಬಾವಿ, ಕೊಳವೆ ಬಾವಿ, ಶುದ್ಧೀಕರಣ ಕೇಂದ್ರಗಳು, ಸಂಗ್ರಹಣಾ ಬಾವಿ ಹಾಗೂ ಶುದ್ಧೀಕರಣ ಗ್ಯಾಲರಿ ಅಥವಾ ಅವುಗಳ ಯಾವುವೇ ಸಂಯೋಜನೆಗಳು ಅಥವಾ ವ್ಯತ್ಯಾಸಗಳನ್ನು ಒಳಗೊಳ್ಳುತ್ತದೆ.

## ಅಧ್ಯಾಯ - II

### ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಿಗೆ ಸಂರಕ್ಷಣಾ ಕ್ರಮಗಳು

3. **ಬಾವಿ ತೋಡುವುದಕ್ಕೆ ಅನುಮತಿ ಇತ್ಯಾದಿ.-** (1) (3)ನೇ ಉಪ ಪ್ರಕರಣದ ಅಡಿಯಲ್ಲಿ ಯುಕ್ತ ಪ್ರಾಧಿಕಾರದ ಅನುಮತಿ ಪಡೆಯದೆ ಯಾವೊಬ್ಬ ವ್ಯಕ್ತಿಯೂ ಒಂದು ಸಾರ್ವಜನಿಕ ಕುಡಿಯುವ ನೀರಿನ ಮೂಲದ ಐದುನೂರು ಮೀಟರುಗಳೊಳಗೆ ನೀರನ್ನು ತೆಗೆಯುವ ಅಥವಾ ಸೇದುವ ಉದ್ದೇಶಕ್ಕಾಗಿ ಯಾವುದೇ ಬಾವಿಯನ್ನು ತೋಡತಕ್ಕದ್ದಲ್ಲ:

ಪರಂತು, ಈ ಉಪ ಪ್ರಕರಣದಲ್ಲಿರುವ ಯಾವುದೂ, ಸಾರ್ವಜನಿಕ ಕುಡಿಯುವ ನೀರಿನ ಮೂಲವಾಗಿ ಬಳಸುವುದಕ್ಕಾಗಿ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಪರವಾಗಿ ಬಾವಿ ತೋಡುವುದಕ್ಕೆ ಅನ್ವಯಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಅನುಮತಿ ಪಡೆಯಬಯಸುವ ಯಾವೊಬ್ಬ ವ್ಯಕ್ತಿಯು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ಶುಲ್ಕದೊಂದಿಗೆ ಯುಕ್ತ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಯುಕ್ತ ಪ್ರಾಧಿಕಾರವು, ತಾಂತ್ರಿಕ ಅಧಿಕಾರಿಯ ಸಲಹೆಯ ಮೇರೆಗೆ ಮತ್ತು ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಿಂದ ಕುಡಿಯುವ ನೀರಿನ ಉದ್ದೇಶಗಳಿಗಾಗಿ ಅಗತ್ಯವಿರುವ ಪ್ರಮಾಣದ ನೀರು ಸರಬರಾಜು ಪಡೆಯಲು ಸಾರ್ವಜನಿಕರಿಗಿರುವ

ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ, ಕುಡಿಯುವ ನೀರಿನ ಉದ್ದೇಶಗಳಿಗಾಗಿ ಬಾವಿ ತೋಡಲು ಅನುಮತಿ ನೀಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು.

(4) (3)ನೇ ಉಪ ಪ್ರಕರಣದ ಅಡಿಯಲ್ಲಿ ನೀಡಲಾದ ಪ್ರತಿಯೊಂದು ಅನುಮತಿಯು,-

(ಎ) ಯುಕ್ತ ಪ್ರಾಧಿಕಾರವು, ಸಾರ್ವಜನಿಕ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಯ ದೃಷ್ಟಿಯಿಂದ ಅಂಥ ಬಾವಿಯಿಂದ ನೀರು ತೆಗೆಯುವುದನ್ನು ಕಾಲಕಾಲಕ್ಕೆ ನಿಷೇಧಿಸುವುದು, ನಿರ್ಬಂಧಿಸುವುದು ಮತ್ತು ನಿಯಂತ್ರಿಸುವುದು ಅಗತ್ಯವೆಂದು ಅಭಿಪ್ರಾಯ ಪಟ್ಟರೆ, ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಹಾಗೆ ಆದೇಶ ಹೊರಡಿಸುವ ಮೂಲಕ ನಿಷೇಧಿಸಬಹುದು, ನಿರ್ಬಂಧಿಸಬಹುದು ಮತ್ತು ನಿಯಂತ್ರಿಸಬಹುದೆಂಬ ಷರತ್ತಿಗೆ; ಮತ್ತು

(ಬಿ) ನಿಯಮಿಸಬಹುದಾದ ಅಂಥ ಇತರ ಷರತ್ತುಗಳು ಮತ್ತು ನಿರ್ಬಂಧಗಳಿಗೆ,

- ಒಳಪಟ್ಟಿರತಕ್ಕದ್ದು.

**4. ನೀರಿನ ಕೊರತೆಯಿರುವ ಪ್ರದೇಶವೆಂಬುದಾಗಿ ಘೋಷಿಸುವುದು.-** ಮಳೆಗಾಲದ ಅವಧಿಯ ಯಾವುದೇ ಸಮಯದಲ್ಲಿ ಅಥವಾ ಆ ತರುವಾಯ, ಯುಕ್ತ ಪ್ರಾಧಿಕಾರವು, ತಾಂತ್ರಿಕ ಅಧಿಕಾರಿಯು ಸಲಹೆಯ ಮೇರೆಗೆ ಮತ್ತು ಮಳೆಯ ಪ್ರಮಾಣ ಮತ್ತು ರೀತಿಯನ್ನು ಹಾಗೂ ಸಂಬಂಧಪಟ್ಟ ಇತರ ಯಾವುದೇ ಅಂಶವನ್ನು ಗಮನದಲ್ಲಿಟ್ಟುಕೊಂಡು, ಅಧಿಕಾರ ವ್ಯಾಪ್ತಿಯುಳ್ಳ ಯಾವುದೇ ಪ್ರದೇಶದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳ ಮೇಲೆ ಪ್ರತಿಕೂಲ ಪರಿಣಾಮವುಂಟಾಗುವ ಸಂಭವಿದೆಯೆಂದು ಅಭಿಪ್ರಾಯ ಪಟ್ಟರೆ, ಅದು ಆದೇಶ ಹೊರಡಿಸುವ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಗೆ, ಆದರೆ ಒಂದು ಬಾರಿಗೆ ಒಂದು ವರ್ಷವನ್ನು ಮೀರದಂತೆ, ಆ ಪ್ರದೇಶವನ್ನು ನೀರಿನ ಕೊರತೆಯಿರುವ ಪ್ರದೇಶವೆಂಬುದಾಗಿ ಘೋಷಿಸಬಹುದು.

**5. ನೀರಿನ ಕೊರತೆಯಿರುವ ಪ್ರದೇಶದಲ್ಲಿ ಬಾವಿಗಳಿಂದ ನೀರು ತೆಗೆಯುವುದನ್ನು ನಿಯಂತ್ರಿಸುವುದು.-** (1) ಯಾವುದೇ ಪ್ರದೇಶವನ್ನು 4ನೇ ಪ್ರಕರಣದ ಅಡಿಯಲ್ಲಿ ನೀರು ಕೊರತೆಯಿರುವ ಪ್ರದೇಶ ಎಂಬುದಾಗಿ ಘೋಷಿಸಿದ ತರುವಾಯ, ಯುಕ್ತ ಪ್ರಾಧಿಕಾರವು, ನೀರಿನ ಕೊರತೆಯಿರುವ ಅವಧಿಯಲ್ಲಿ, ಆದೇಶ ಹೊರಡಿಸುವ

ಮೂಲಕ, ಸಾರ್ವಜನಿಕ ಕುಡಿಯುವ ನೀರಿನ ಮೂಲದಿಂದ ಐದುನೂರು ಮೀಟರುಗಳ ದೂರದೊಳಗೆ ಯಾವುದೇ ಬಾವಿಯಿದ್ದರೆ, ಯಾವುದೇ ಉದ್ದೇಶಕ್ಕಾಗಿ ಅದರಿಂದ ಹಾಗೆ ನೀರು ತೆಗೆಯುವುದನ್ನು ನಿರ್ಬಂಧಿಸುವ ಅಥವಾ ನಿಷೇಧಿಸುವ ಮೂಲಕ ಅಂಥ ಪ್ರದೇಶದಲ್ಲಿ ಆ ಬಾವಿಯಿಂದ ನೀರು ತೆಗೆಯುವುದನ್ನು ನಿಯಂತ್ರಿಸಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಹಾಗೆ ನಿರ್ಬಂಧಿಸುವ ಅಥವಾ ನಿಷೇಧಿಸುವ ಆದೇಶವನ್ನು, ಸಂದರ್ಭಾನುಸಾರ, ನಿರ್ಬಂಧ ಅಥವಾ ನಿಷೇಧದ ಆದೇಶವು ಪ್ರಾರಂಭವಾಗುವ ಕನಿಷ್ಠ ಹದಿನೈದು ದಿನಗಳ ಮೊದಲು ಬಾವಿಯ ಮಾಲೀಕನಿಗೆ ಖುದ್ದಾಗಿ ತಲುಪಿಸುವ ಅಥವಾ ನೀಡುವ ಮೂಲಕ ಜಾರಿ ಮಾಡತಕ್ಕದ್ದು ಅಥವಾ ಜಾರಿ ಮಾಡಿಸತಕ್ಕದ್ದು. ಮಾಲೀಕನು ಲಭ್ಯವಿಲ್ಲದಿದ್ದಲ್ಲಿ, ಆದೇಶದ ಅಧಿಕೃತ ಪ್ರತಿಯನ್ನು ಕುಟುಂಬದ ಯಾವೊಬ್ಬ ವಯಸ್ಕ ಸದಸ್ಯನಿಗೆ ಜಾರಿ ಮಾಡಬಹುದು. ಒಂದು ನಿಗಮ ಅಥವಾ ಫರ್ಮಿಗೆ ಸಂಬಂಧಪಟ್ಟ ಆದೇಶದ ಸಂಬಂಧದಲ್ಲಿ, ಆದೇಶವನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೊದಲನೇ ಅನುಸೂಚಿಯಲ್ಲಿರುವಂತೆ, ಸಂದರ್ಭಾನುಸಾರ, ಆದೇಶ XXIXರ 2ನೇ ನಿಯಮದ ಅಥವಾ ಆದೇಶ XXXರ 3ನೇ ನಿಯಮದ ಅಡಿಯಲ್ಲಿ ಸಮನನ್ನು ಜಾರಿ ಮಾಡುವ ವಿಧಾನದಲ್ಲಿ ಜಾರಿ ಮಾಡತಕ್ಕದ್ದು.

**6. ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶ ಎಂದು ಘೋಷಿಸುವುದು.-** (1) ಯುಕ್ತ ಪ್ರಾಧಿಕಾರವು, ತಾಂತ್ರಿಕ ಅಧಿಕಾರಿಯ ಸಲಹೆಯ ಮೇರೆಗೆ, ಒಂದು ಜಲವಿಭಾಜಕ ಪ್ರದೇಶವನ್ನು ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶ ಎಂದು ಘೋಷಿಸಬಹುದು.

(2) ಯಾವುದೇ ಕಾಲದಲ್ಲಿ, ಯುಕ್ತ ಪ್ರಾಧಿಕಾರವು ತಾಂತ್ರಿಕ ಅಧಿಕಾರಿಯ ಸಲಹೆಯ ಮೇರೆಗೆ ಅತ್ಯಧಿಕವಾಗಿ ಬಳಸಲಾದ ಜಲ ವಿಭಾಜಕದಲ್ಲಿ ನೀರಿನ ಲಭ್ಯತೆಯಲ್ಲಿ ಸುಧಾರಣೆಯಾಗಿದೆಯೆಂದು ಯುಕ್ತಪ್ರಾಧಿಕಾರಕ್ಕೆ ಮನವರಿಕೆಯಾದರೆ ಅದು ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ ಅಡಿಯಲ್ಲಿ ಘೋಷಿಸಿರುವುದನ್ನು ರದ್ದುಗೊಳಿಸಬಹುದು.

**7. ಅತ್ಯಧಿಕವಾಗಿ ಬಳಸಲಾದ ಜಲ ವಿಭಾಜಕ ಪ್ರದೇಶದಲ್ಲಿ ಬಾವಿ ತೋಡಲು ನಿಷೇಧ.-** (1) ಯಾವೊಬ್ಬ ವ್ಯಕ್ತಿಯು, (3)ನೇ ಉಪ ಪ್ರಕರಣದ ಅಡಿಯಲ್ಲಿ ಯುಕ್ತ ಪ್ರಾಧಿಕಾರದ ಅನುಮತಿ ಪಡೆಯದೆ ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶ ದೊಳಗೆ ಯಾವುದೇ ಉದ್ದೇಶಕ್ಕಾಗಿ ಬಾವಿ ತೋಡತಕ್ಕದ್ದಲ್ಲ:

ಪರಂತು, ಈ ಉಪ ಪ್ರಕರಣದಲ್ಲಿರುವ ಯಾವುದೂ, ಸಾರ್ವಜನಿಕ ಕುಡಿಯುವ ನೀರಿನ ಮೂಲವಾಗಿ ಬಳಸುವುದಕ್ಕೆ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಪರವಾಗಿ ಬಾವಿ ತೋಡುವುದಕ್ಕೆ ಅನ್ವಯಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಅನುಮತಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದ ಅಂಥ ಶುಲ್ಕದೊಂದಿಗೆ ಯುಕ್ತ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(3) ಯುಕ್ತ ಪ್ರಾಧಿಕಾರವು, ಅರ್ಜಿಯನ್ನು ಸ್ವೀಕರಿಸಿದ ತರುವಾಯ ಮತ್ತು ಕುಡಿಯುವ ನೀರನ್ನು ಒದಗಿಸುವ ಉದ್ದೇಶಗಳಿಗಾಗಿ ಇರುವ ನೀರಿನ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ, ಬಾವಿಯನ್ನು ತೋಡುವುದಕ್ಕೆ ಅನುಮತಿ ನೀಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು.

(4) ಈ ಪ್ರಕರಣದ ಅಡಿಯಲ್ಲಿ ನೀಡಲಾದ ಪ್ರತಿಯೊಂದು ಅನುಮತಿಯು,-

(ಎ) ಯುಕ್ತ ಪ್ರಾಧಿಕಾರವು, ಸಾರ್ವಜನಿಕ ಕುಡಿಯುವ ನೀರಿನ ಮೂಲದ ಸಂರಕ್ಷಣೆಯ ದೃಷ್ಟಿಯಿಂದ ಅಂಥ ಬಾವಿಯಿಂದ ನೀರು ತೆಗೆಯುವುದನ್ನು ಕಾಲಕಾಲಕ್ಕೆ ನಿಷೇಧಿಸುವುದು, ನಿರ್ಬಂಧಿಸುವುದು ಮತ್ತು ನಿಯಂತ್ರಿಸುವುದು ಅಗತ್ಯವೆಂದು ಅಭಿಪ್ರಾಯಪಟ್ಟರೆ, ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಹಾಗೆ ಆದೇಶ ಹೊರಡಿಸುವ ಮೂಲಕ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಗಾಗಿ ನಿಷೇಧಿಸಬಹುದು, ನಿರ್ಬಂಧಿಸಬಹುದು ಮತ್ತು ನಿಯಂತ್ರಿಸಬಹುದೆಂಬ ಷರತ್ತಿಗೆ; ಮತ್ತು

(ಬಿ) ನಿಯಮಿಸಬಹುದಾದ ಅಂಥ ಇತರ ಷರತ್ತುಗಳು ಮತ್ತು ನಿರ್ಬಂಧಗಳಿಗೆ,

- ಒಳಪಟ್ಟಿರತಕ್ಕದ್ದು.

**8. ನಿಶ್ಚಿತ ಅವಧಿಯವರೆಗೆ ಈಗಿರುವ ಬಾವಿಯಿಂದ ನೀರನ್ನು ತೆಗೆಯುವುದಕ್ಕೆ ನಿಷೇಧ.-** ತಾಂತ್ರಿಕ ಅಧಿಕಾರಿಯ ಸಲಹೆಯ ಮೇರೆಗೆ ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶದಲ್ಲಿ ಈಗಿರುವ ಯಾವುದೇ ಬಾವಿಯು ಯಾವುದೇ ಸಾರ್ವಜನಿಕ ಕುಡಿಯುವ ನೀರಿನ ಮೂಲದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ ಯೆಂಬುದು ಯುಕ್ತ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ ಮತ್ತು ಮಳೆ ಬೀಳುವ ಪ್ರಮಾಣ ಹಾಗೂ ರೀತಿಯನ್ನು ಮತ್ತು ಸಂಬಂಧಪಟ್ಟ ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಅದರ ಮಾಲೀಕನಿಗೆ ಅಹವಾಲನ್ನು ಹೇಳಿಕೊಳ್ಳಲು ಸಮಂಜಸವಾದ ಅವಕಾಶವನ್ನು ಕೊಟ್ಟ ತರುವಾಯ, ಆದೇಶದ ಮೂಲಕ ಪ್ರತಿ ವರ್ಷ ಫೆಬ್ರವರಿ ಒಂದರಿಂದ ಜುಲೈ

ಮೂವತ್ತೊಂದರವರೆಗಿನ ಐದು ತಿಂಗಳ ಅವಧಿಯಲ್ಲಿ ಅಂಥ ಬಾವಿಯಿಂದ ನೀರನ್ನು ತೆಗೆಯುವುದನ್ನು ನಿಷೇಧಿಸಬಹುದು.

**9. ಈಗಿರುವ ಬಾವಿಯನ್ನು ಮುಚ್ಚುವುದು.-** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ತಾಂತ್ರಿಕ ಅಧಿಕಾರಿಯ ಸಲಹೆಯ ಮೇರೆಗೆ ಅತ್ಯಧಿಕವಾಗಿ ಬಳಸಲಾದ ಜಲವಿಭಾಜಕ ಪ್ರದೇಶದಲ್ಲಿ ಇರುವ ಯಾವುದೇ ಬಾವಿಯು ಯಾವುದೇ ಸಾರ್ವಜನಿಕ ಕುಡಿಯುವ ನೀರಿನ ಮೂಲದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತಿದೆಯೆಂದು ಮತ್ತು ಅಂಥ ನೀರಿನ ಮೂಲವನ್ನು 8ನೇ ಪ್ರಕರಣದಡಿಯ ಕ್ರಮದಿಂದ ಸಾಕಷ್ಟು ಕಾಪಾಡಲು ಸಾಧ್ಯವಾಗುತ್ತಿಲ್ಲವೆಂದು ಯುಕ್ತ ಪ್ರಾಧಿಕಾರಕ್ಕೆ ಮನದಟ್ಟಾದರೆ ಅದು, ಬಾವಿಯ ಮಾಲೀಕನಿಗೆ ಅಹವಾಲನ್ನು ಹೇಳಿಕೊಳ್ಳಲು ಸಮಂಜಸವಾದ ಅವಕಾಶವನ್ನು ಕೊಟ್ಟ ತರುವಾಯ, ಆದೇಶದ ಮೂಲದ, ಅಂಥ ಬಾವಿಯು ಸಾರ್ವಜನಿಕ ಕುಡಿಯುವ ನೀರಿನ ಮೂಲದ ಮೇಲೆ ಎಷ್ಟರ ಮಟ್ಟಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು ಆ ಬಾವಿಯಿಂದ ನೀರನ್ನು ತೆಗೆಯುವುದನ್ನು ನಿಲ್ಲಿಸುವಂತೆ ಮತ್ತು ತಾತ್ಕಾಲಿಕವಾಗಿಯಾಗಲೀ ಅಥವಾ ಖಾಯಂ ಆಗಿಯಾಗಲೀ ಅದನ್ನು ಕೂಡಲೇ ಮುಚ್ಚಿಸಿಬಿಡುವಂತೆ ಅಥವಾ ಸೀಲು ಮಾಡುವಂತೆ ಆತನನ್ನು ಅಗತ್ಯಪಡಿಸಬಹುದು.

**10. ಮಾಹಿತಿ ಪಡೆದುಕೊಳ್ಳುವುದಕ್ಕಾಗಿ ಯಾವುದೇ ಭೂಮಿಯನ್ನು ಪ್ರವೇಶಿಸಲು ಅಧಿಕಾರ.-** ಸಾರ್ವಜನಿಕ ಕುಡಿಯುವ ನೀರಿನ ಮೂಲದ ಸಂರಕ್ಷಣೆಗೆ ಅಥವಾ ಸಾರ್ವಜನಿಕ ನೀರು ಪೂರೈಕೆ ವ್ಯವಸ್ಥೆಯ ನಿರ್ವಹಣೆಗೆ ಸಂಬಂಧಪಟ್ಟಂತೆ ವಿಚಾರಣೆ ಅಥವಾ ಪರೀಕ್ಷೆ ನಡೆಸುವುದು ಅವಶ್ಯಕವಾದಾಗಲೆಲ್ಲಾ, ಯುಕ್ತ ಪ್ರಾಧಿಕಾರವು ಅಥವಾ ಈ ಬಗ್ಗೆ ಅದರಿಂದ ಸೂಕ್ತವಾಗಿ ಅಧಿಕಾರ ಪಡೆದಂಥ ಯಾವೊಬ್ಬ ಅಧಿಕಾರಿಯು, ಮುಂಚಿತವಾಗಿ ನೋಟೀಸನ್ನು ನೀಡಿದ ತರುವಾಯ,-

(ಎ) ಸದರಿ ಉದ್ದೇಶಕ್ಕಾಗಿ ತಾನು ಅಥವಾ ಅದು ಅವಶ್ಯಕವೆಂದು ಭಾವಿಸಬಹುದಾದ ಅಂಥ ಭೂಮಿಯನ್ನು ಪ್ರವೇಶಿಸಬಹುದು;

(ಬಿ) ಸಮೀಕ್ಷೆಗಳನ್ನು ನಡೆಸಬಹುದು ಅಥವಾ ಅದರ ಮೇಲೆ ಮಟ್ಟಗಳನ್ನು ಗುರುತಿಸಬಹುದು;

(ಸಿ) ಪಂಪಿಂಗ್ ಪರೀಕ್ಷೆಗಳನ್ನು ನಡೆಸಬಹುದು ಮತ್ತು ಭೂ ಭೌತಿಕ ಸಮೀಕ್ಷೆಗಳನ್ನು ನಡೆಸಬಹುದು;

(ಡಿ) ಕೊಳವೆ ಬಾವಿಯ ಮಾಪನ ನಡೆಸಬಹುದು (ವೆಲ್‌ಲಾಗಿಂಗ್);

(ಇ) ಬಾವಿಯ ಮೇಲೆ, ನೀರಿನ ಮಟ್ಟವನ್ನು ಅಳೆಯುವ ರೆಕಾರ್ಡರ್ ಹಾಗೂ ನೀರಿನ ಗೇಜುಗಳನ್ನು ಅಳವಡಿಸಬಹುದು ಮತ್ತು ಅವುಗಳನ್ನು ನಿರ್ವಹಿಸಬಹುದು; ಮತ್ತು

(ಎಫ್) ಅಂಥ ವಿಚಾರಣೆ ಮತ್ತು ಪರೀಕ್ಷೆ ನಡೆಸಲು ಅಗತ್ಯವಾಗಬಹುದಾದ ಅಂಥ ಇತರ ಎಲ್ಲ ಕಾರ್ಯಗಳನ್ನು ಮಾಡಬಹುದು.

**11. 3, 5, 7, 8 ಅಥವಾ 9ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಯನ್ನು ನಿಲ್ಲಿಸಲು ಅಧಿಕಾರ.-** (1) 3 ಅಥವಾ 7ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಬಾವಿಯನ್ನು ತೋಡಲಾಗಿದೆ ಅಥವಾ ತೋಡಲಾಗುತ್ತಿದೆಯೆಂದು ಅಥವಾ 5, 8 ಅಥವಾ 9ನೇ ಪ್ರಕರಣವನ್ನು ಉಲ್ಲಂಘಿಸಿ ನೀರನ್ನು ತೆಗೆಯಲಾಗಿದೆ ಅಥವಾ ತೆಗೆಯ ಲಾಗುತ್ತಿದೆಯೆಂದು ಯುಕ್ತ ಪ್ರಾಧಿಕಾರಕ್ಕೆ ಕಂಡುಬಂದಾಗಲೆಲ್ಲಾ, ಯುಕ್ತ ಪ್ರಾಧಿಕಾರವು ಅಥವಾ ಈ ಪರವಾಗಿ ಸೂಕ್ತವಾಗಿ ಅಧಿಕಾರ ಪಡೆದ ಒಬ್ಬ ಅಧಿಕಾರಿಯು, ಆ ಭೂಮಿಯನ್ನು ಪ್ರವೇಶಿಸಬಹುದು. ಅಡಚಣೆಯೇನಾದರೂ ಇದ್ದಲ್ಲಿ ಅದನ್ನು ನಿವಾರಿಸಿ, ನೀರು ಪಂಪು ಮಾಡುವುದನ್ನು ನಿಲ್ಲಿಸಬಹುದು, ವಿದ್ಯುತ್ ಪೂರೈಕೆಯನ್ನು ನಿಲ್ಲಿಸಬಹುದು, ನೀರನ್ನು ಹಾಗೆ ತೆಗೆಯುವುದಕ್ಕೆ ಬಳಸಲಾದ ಯಾವುದೇ ಸಾಮಗ್ರಿ ಅಥವಾ ಉಪಕರಣವನ್ನು ವಶಪಡಿಸಿಕೊಳ್ಳಬಹುದು ಮತ್ತು ಅಂಥ ಉಲ್ಲಂಘನೆಯನ್ನು ತಡೆಗಟ್ಟಲು ಅಗತ್ಯವಾಗ ಬಹುದಾದ ಅಂಥ ಯಾವುದೇ ಕ್ರಮವನ್ನು ಕೈಗೊಳ್ಳಬಹುದು ಮತ್ತು ಆದೇಶದ ಮೂಲಕ, ಬಾವಿಯ ಮಾಲೀಕ ಅಥವಾ ಅದರ ಸ್ವಾಧೀನತೆಯನ್ನು ಹೊಂದಿರುವ ವ್ಯಕ್ತಿಯು ಆತನ ಖರ್ಚಿನಲ್ಲಿ ಮತ್ತು ಯುಕ್ತ ಪ್ರಾಧಿಕಾರವು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಬಾವಿಯನ್ನು ಮುಚ್ಚುವಂತೆ ಅಥವಾ ಸೀಲು ಮಾಡುವಂತೆ ಅಗತ್ಯ ಪಡಿಸಬಹುದು ಮತ್ತು ಅಂಥ ಮಾಲೀಕ ಅಥವಾ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸತಕ್ಕದ್ದು.

(2) ಅಂಥ ಮಾಲೀಕ ಅಥವಾ ವ್ಯಕ್ತಿಯು (1)ನೇ ಉಪ ಪ್ರಕರಣದಡಿ ಮಾಡಲಾದ ಯಾವುದೇ ಆದೇಶವನ್ನು ಪಾಲಿಸಲು ತಪ್ಪಿರುವಲ್ಲಿ, ಯುಕ್ತ ಪ್ರಾಧಿಕಾರವು, ಅಂಥ ಮಾಲೀಕನಿಗೆ ಅಥವಾ ವ್ಯಕ್ತಿಗೆ ಆ ಬಗ್ಗೆ ಸೂಕ್ತ ನೋಟೀಸನ್ನು ನೀಡಿದ ತರುವಾಯ, ಆ ಭೂಮಿಯನ್ನು ಪ್ರವೇಶಿಸಬಹುದು ಮತ್ತು ಬಾವಿಯನ್ನು ಮುಚ್ಚಿಸಬಹುದು ಅಥವಾ ಸೀಲು ಮಾಡಬಹುದು ಮತ್ತು ಈ ಬಗ್ಗೆ ವಹಿಸಲಾದ ವೆಚ್ಚವನ್ನು ಭೂಕಂದಾಯದ ಬಾಕಿಯಂತೆ ಅಂಥ ಮಾಲೀಕ ಅಥವಾ ವ್ಯಕ್ತಿಯಿಂದ ವಸೂಲು ಮಾಡಿಕೊಳ್ಳತಕ್ಕದ್ದು.

**12. ಪರಿಹಾರ ಸಂದಾಯ.-** (1) 9ನೇ ಪ್ರಕರಣದಡಿ ಬಾವಿಯನ್ನು ಮುಚ್ಚಿಸಿ ಬಿಡುವ ಅಥವಾ ಸೀಲು ಮಾಡುವ ಆದೇಶವನ್ನು ಮಾಡಿರುವಲ್ಲಿ, ಅಂಥ ಬಾವಿಯ

ಮಾಲೀಕನು ಪರಿಹಾರ ಸಂದಾಯಕ್ಕಾಗಿ ನಿಯಮಿಸಲಾದ ನಮೂನೆಯಲ್ಲಿ ಯುಕ್ತ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಯುಕ್ತ ಪ್ರಾಧಿಕಾರವು, ತಾನು ಅವಶ್ಯಕವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಅಂಥ ಸಾಕ್ಷ್ಯಗಳನ್ನು ಹಾಜರುಪಡಿಸುವಂತೆ ಮಾಲೀಕನನ್ನು ಅಗತ್ಯಪಡಿಸಿದ ಮೇಲೆ ಮಾಲೀಕನಿಗೆ ಭೂ ಆರ್ಜನೆ ಅಧಿನಿಯಮ, 1894ರ ಉಪಬಂಧಗಳಿಗೆ ಅನುಸಾರವಾಗಿ ಮಾರುಕಟ್ಟೆ ಬೆಲೆಯ ಪ್ರಕಾರ ನಿರ್ಧರಿಸಲಾದಂತೆ ಪರಿಹಾರ ನೀಡುವುದಕ್ಕಾಗಿ ಆದೇಶವನ್ನು ಹೊರಡಿಸಬಹುದು.

**13. ಪರಿಹಾರ ಕ್ಲೇಮು ಮಾಡುವುದಕ್ಕೆ ಪ್ರತಿಬಂಧ.-** 12ನೇ ಪ್ರಕರಣದ ಉಪಬಂಧಕ್ಕೆ ಒಳಪಟ್ಟು, 3ನೇ ಪ್ರಕರಣದ (4)ನೇ ಉಪ ಪ್ರಕರಣದ (ಎ) ಖಂಡದಡಿ ಅಥವಾ 8, 9, ಅಥವಾ 11ನೇ ಪ್ರಕರಣದಡಿ ಹೊರಡಿಸಲಾದ ಯಾವುದೇ ಆದೇಶದ ಪರಿಣಾಮವಾಗಿ ಅಥವಾ ಈ ಅಧಿನಿಯಮದಡಿ ಕೈಗೊಳ್ಳಲಾದ ಯಾವುದೇ ಕ್ರಮದಿಂದಾಗಿ ಯಾವೊಬ್ಬ ವ್ಯಕ್ತಿಗೆ ಉಂಟಾದ ಯಾವುದೇ ನಷ್ಟದ ಬಗ್ಗೆ ಸರ್ಕಾರದಿಂದ ಯಾವುದೇ ನಷ್ಟ ಪರಿಹಾರ ಅಥವಾ ಪರಿಹಾರ ಕ್ಲೇಮು ಮಾಡಲು ಹಕ್ಕುಳ್ಳವನಾಗಿರ ತಕ್ಕದ್ದಲ್ಲ.

## ಅಧ್ಯಾಯ - III

### ಸಂಕೀರ್ಣ

**14. ಅಪೀಲುಗಳು.-** (1) ಈ ಅಧಿನಿಯಮದ ಯಾವುವೇ ಉಪಬಂಧಗಳಡಿ ಯುಕ್ತ ಪ್ರಾಧಿಕಾರವು ಮಾಡಿದ ಯಾವುದೇ ಆದೇಶದಿಂದ ತೊಂದರೆಗೊಳಗಾದ ಯಾರೇ ವ್ಯಕ್ತಿಯು, ಆತನು ಆದೇಶವನ್ನು ಪಡೆದುಕೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಆ ಆದೇಶವನ್ನು ಡೆಪ್ಯುಟಿ ಕಮಿಷನರನಲ್ಲದ ಇತರ ಯಾವೊಬ್ಬ ಅಧಿಕಾರಿಯು ಮಾಡಿದ್ದಲ್ಲಿ, ಡೆಪ್ಯುಟಿ ಕಮೀಷನರಿಗೆ ಮತ್ತು ಆ ಆದೇಶವನ್ನು ಡೆಪ್ಯುಟಿ ಕಮೀಷನರು ಮಾಡಿದ್ದಲ್ಲಿ ನಿಯಮಿಸಬಹುದಾದ ಅಂತಹ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು. ಅಂಥ ಅಪೀಲನ್ನು ಪಡೆದುಕೊಂಡ ಮೇಲೆ, ಅಪೀಲು ಪ್ರಾಧಿಕಾರವು ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ಕೊಟ್ಟ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಹೊರಡಿಸತಕ್ಕದ್ದು. ಅಂಥ ಅಪೀಲಿನ ಬಗ್ಗೆ ಅಪೀಲು ಪ್ರಾಧಿಕಾರವು ಮಾಡಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸತಕ್ಕದ್ದಲ್ಲ.

(2) ಅಂಥ ಅಪೀಲಿನ ಬಗ್ಗೆ ಯಾವುದೇ ತೀರ್ಮಾನವನ್ನು ನೀಡುವುದಕ್ಕೆ ಮೊದಲು, ಅಪೀಲು ಪ್ರಾಧಿಕಾರವು, ಗೊತ್ತುಪಡಿಸಬಹುದಾದಂತೆ ಗಣಿ ಮತ್ತು ಭೂವಿಜ್ಞಾನ

ಇಲಾಖೆಯ ಅಂಥ ಅಧಿಕಾರಿಯ ಅಭಿಪ್ರಾಯಗಳನ್ನು ಪಡೆದುಕೊಳ್ಳತಕ್ಕದ್ದು ಮತ್ತು ಅಂಥ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(3) (1)ನೇ ಉಪ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ, ಈ ಅಧಿನಿಯಮದಡಿ ಮಾಡಿದ ಪ್ರತಿಯೊಂದು ಆದೇಶವು ಮತ್ತು ಹೊರಡಿಸಿದ ಪ್ರತಿಯೊಂದು ನಿರ್ದೇಶನವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸತಕ್ಕದ್ದಲ್ಲ.

**15. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** (1) ಈ ಅಧಿನಿಯಮದಡಿ ಅಥವಾ ಈ ಅಧಿನಿಯಮದಡಿ ಮಾಡಿದ ಯಾವುದೇ ಆದೇಶ ಅಥವಾ ಅದರಡಿ ಹೊರಡಿಸಿದ ನಿರ್ದೇಶನಗಳಿಗನುಸಾರವಾಗಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಈ ಅಧಿನಿಯಮದಡಿ ನೇಮಕನಾದ ಅಥವಾ ಅಧಿಕಾರಪಡೆದ ಯಾವೊಬ್ಬ ಲೋಕ ನೌಕರ ಅಥವಾ ವ್ಯಕ್ತಿಯ ವಿರುದ್ಧವಾಗಿ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ನ್ಯಾಯಿಕ ವ್ಯವಹರಣೆಯನ್ನು ನಡೆಸತಕ್ಕದ್ದಲ್ಲ.

(2) ಈ ಅಧಿನಿಯಮದಡಿ ಅಥವಾ ಈ ಅಧಿನಿಯಮದಡಿ ಮಾಡಿದ ಯಾವುದೇ ಆದೇಶ ಅಥವಾ ಹೊರಡಿಸಿದ ಯಾವುದೇ ನಿರ್ದೇಶನದ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟದ ಬಗ್ಗೆ ಸರ್ಕಾರ ಅಥವಾ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧವಾಗಿ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ನ್ಯಾಯಿಕ ವ್ಯವಹರಣೆಯನ್ನು ನಡೆಸತಕ್ಕದ್ದಲ್ಲ.

**16. ದಂಡನೆ.-** (1) ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಈ ಅಧಿನಿಯಮದಡಿ ಯಾವೊಬ್ಬ ವ್ಯಕ್ತಿಗೆ ಆತನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಡ್ಡಿಯನ್ನುಂಟುಮಾಡುವ ಅಥವಾ ಈ ಅಧಿನಿಯಮದಡಿ ಮಾಡಿದ ಯಾವುದೇ ಆದೇಶವನ್ನು ಅಥವಾ ಯಾವುದೇ ನಿಯಮವನ್ನು ಉಲ್ಲಂಘಿಸುವ, ಅತಿಕ್ರಮಿಸುವ ಯಾವೊಬ್ಬ ವ್ಯಕ್ತಿಯು, ದೋಷ ಸಿದ್ಧಿಯ ತರವಾಯ ಒಂದು ತಿಂಗಳಿಗೆ ಕಡಿಮೆ ಇಲ್ಲದ ಆದರೆ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಸೂಕ್ತ ಅಧಿಕಾರ ಪಡೆಯದೆ ಸಾರ್ವಜನಿಕ ನೀರು ಪೂರೈಕೆ ವ್ಯವಸ್ಥೆಯ ಯಾವುದೇ ಭಾಗಕ್ಕೆ ನಷ್ಟವನ್ನುಂಟು ಮಾಡುವ, ಬದಲಾಯಿಸುವ ಅಥವಾ ಅಡ್ಡಿಯನ್ನುಂಟು ಮಾಡುವ, ಯಾವೊಬ್ಬ ವ್ಯಕ್ತಿಯು, ದೋಷ ಸಿದ್ಧಿಯ ತರುವಾಯ, ಎರಡು ತಿಂಗಳಿಗೆ ಕಡಿಮೆ ಇಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಮುಂದುವರಿಯುತ್ತಿರುವ ಅಪರಾಧದ ಸಂದರ್ಭದಲ್ಲಿ, ಅಪರಾಧಿಯು, ದೋಷ ಸಿದ್ಧಿಯ ತರುವಾಯ ಅಂಥ ಅಪರಾಧವು ಮುಂದುವರಿಯುತ್ತಿರುವ ಪ್ರತಿಯೊಂದು ದಿನಕ್ಕೆ ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**17. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದಡಿಯ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು:

ಪರಂತು, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಆತನನ್ನು ಈ ಉಪ ಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದಡಿಯ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ಮ್ಯಾನೇಜರ್, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತಾದರೆ, ಅಂಥ ನಿರ್ದೇಶಕ, ಮ್ಯಾನೇಜರ್, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಆತನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ, ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುಗಾರ.

**18. ಅಧಿನಿಯಮದ ಅಧ್ಯಾರೋಹಿ ಪ್ರಭಾವ.-** ಈ ಅಧಿನಿಯಮದ ಅಥವಾ ಅದರ ಮೇರೆಗೆ ಹೊರಡಿಸಿದ ಅಥವಾ ಮಾಡಿದ ಒಂದು ಆದೇಶದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿರುವುದಕ್ಕೆ ವ್ಯತಿರಿಕ್ತವಾಗಿ ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

**19. ನೋಟೀಸು ಇತ್ಯಾದಿಯನ್ನು ಜಾರಿಗೊಳಿಸುವ ವಿಧಾನ.-** (1) ನಿಯಮಿಸ ಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮ ಅಥವಾ ಅದರಡಿ ಮಾಡಲಾದ ಯಾವುದೇ ಆದೇಶದಡಿ ಯಾವುದೇ ನೋಟೀಸು ಅಥವಾ ಇತರ ದಸ್ತಾವೇಜನ್ನು, ಯಾವ ವ್ಯಕ್ತಿಯ ಹೆಸರಿಗೆ ಅದನ್ನು ಬರೆಯಲಾಗಿದೆಯೋ ಆ ವ್ಯಕ್ತಿಗೆ,-

(i) ಸದರಿ ನೋಟೀಸು ಅಥವಾ ದಸ್ತಾವೇಜನ್ನು ಅಥವಾ ಸದರಿ ಆದೇಶದ ಒಂದು ಪ್ರತಿಯನ್ನು ನೀಡುವ ಅಥವಾ ಸಲ್ಲಿಸುವ ಮೂಲಕ; ಅಥವಾ

(ii) ಅಂಥ ವ್ಯಕ್ತಿಯು ಲಭ್ಯವಿಲ್ಲದಿದ್ದರೆ, ಕೊನೆಯದಾಗಿ ಆತನು ವಾಸಿಸುತ್ತಿದ್ದ ನೆಂದು ಅಥವಾ ವ್ಯವಹಾರ ನಡೆಸುತ್ತಿದ್ದನೆಂದು ತಿಳಿದುಬಂದ ಸ್ಥಳದಲ್ಲಿ ಅಂಥ ನೋಟೀಸು ಅಥವಾ ದಸ್ತಾವೇಜು ಅಥವಾ ಆದೇಶದ ಪ್ರತಿಯನ್ನು ಇಡುವ ಮೂಲಕ ಅಥವಾ ಆತನ ಕುಟುಂಬದ ಒಬ್ಬ ವಯಸ್ಕ ಸದಸ್ಯನಿಗೆ ಅಥವಾ ನೌಕರನಿಗೆ ಅದನ್ನು ನೀಡುವ ಅಥವಾ ಕೊಡಹೋಗುವ ಮೂಲಕ; ಅಥವಾ

(iii) ಅಂಥ ನೋಟೀಸು ಅಥವಾ ದಸ್ತಾವೇಜು ಅಥವಾ ಆದೇಶದ ಒಂದು ಪ್ರತಿಯನ್ನು ಆತನಿಗೆ ರಿಜಿಸ್ಟರ್ ಅಂಚೆಯ ಮೂಲಕ ಕಳುಹಿಸುವ ಮೂಲಕ; ಅಥವಾ

(iv) ಅಂಥ ವ್ಯಕ್ತಿ ಕೊನೆಯದಾಗಿ ವಾಸಿಸುತ್ತಿದ್ದನೆಂದು ಅಥವಾ ವ್ಯವಹಾರ ನಡೆಸುತ್ತಿದ್ದನೆಂದು ಅಥವಾ ಲಾಭಗಳಿಸುವುದಕ್ಕಾಗಿ ಸ್ವತಃ ಕೆಲಸ

ಮಾಡುತ್ತಿದ್ದನೆಂದು ತಿಳಿದುಬಂದ ಆತನ ಮನೆ, ಯಾವುದೇ ಇದ್ದರೆ, ಅದರ ಎದ್ದುಕಾಣುವ ಭಾಗದಲ್ಲಿ ಅಂಥ ನೋಟೀಸು ಅಥವಾ ದಸ್ತಾವೇಜು ಅಥವಾ ಆದೇಶದ ಪ್ರತಿಯನ್ನು ಅಂಟಿಸುವ ಮೂಲಕ,

- ಜಾರಿಗೊಳಿಸತಕ್ಕದ್ದು.

(2) ಅಂಥ ಯಾವುದೇ ನೋಟೀಸು ಅದನ್ನು ಜಾರಿಗೊಳಿಸುವ ರೀತಿಯಲ್ಲಿನ ಯಾವುದೇ ದೋಷದ ಕಾರಣದಿಂದ ಶೂನ್ಯವಾಗುವುದೆಂದು ಭಾವಿಸತಕ್ಕದ್ದಲ್ಲ.

**20. ನಿಯಮ ರಚನಾಧಿಕಾರ.-** (1) ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಗಿನವುಗಳ ಬಗ್ಗೆ ಅವಕಾಶ ಕಲ್ಪಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (2)ನೇ ಉಪ ಪ್ರಕರಣದಡಿಯ ಅರ್ಜಿಯ ನಮೂನೆ ಮತ್ತು ಅಂಥ ಅರ್ಜಿಯ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಶುಲ್ಕಗಳು;

(ಬಿ) 3ನೇ ಪ್ರಕರಣದ (4)ನೇ ಉಪ ಪ್ರಕರಣದ (ಬಿ) ಖಂಡದಡಿಯ ಷರತ್ತುಗಳು ಮತ್ತು ನಿಬಂಧನೆಗಳು;

(ಸಿ) 7ನೇ ಪ್ರಕರಣದ (2)ನೇ ಉಪ ಪ್ರಕರಣದಡಿಯ ಅರ್ಜಿಯ ನಮೂನೆ ಮತ್ತು ಅಂಥ ಅರ್ಜಿಯ ಬಗ್ಗೆ ಸಂದಾಯ ಮಾಡಬೇಕಾದ ಶುಲ್ಕಗಳು;

(ಡಿ) 7ನೇ ಪ್ರಕರಣದ (4)ನೇ ಉಪ ಪ್ರಕರಣದ (ಬಿ) ಖಂಡದಡಿಯ ನಿಬಂಧನೆಗಳು ಮತ್ತು ಷರತ್ತುಗಳು;

(ಇ) 12ನೇ ಪ್ರಕರಣದಡಿ ಪರಿಹಾರದ ಸಂದಾಯಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಮತ್ತು ಪರಿಹಾರ ಸಂದಾಯಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಶುಲ್ಕಗಳನ್ನು ಸಂದಾಯ ಮಾಡಬೇಕಾದ ವಿಧಾನ;

(ಎಫ್) ನಿಯಮಗಳನ್ನು ಮಾಡಬೇಕಾದ ಅಥವಾ ಅವುಗಳು ಅವಶ್ಯಕವಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನ ದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹೀಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಮಾಡಬಾರದೆಂದು ತೀರ್ಮಾನಿಸಿದರೆ ತದನಂತರ ಆ ನಿಯಮವು, ಆ ನಿಯಮದ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗದಂತೆ ಸಂದರ್ಭಾನುಸಾರ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

21. **ತೊಂದರೆಗಳನ್ನು ನಿವಾರಿಸುವ ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯನ್ನಾಗಿ ಮಾಡುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ ಸರ್ಕಾರವು, ಸಂದರ್ಭವು ಉಂಟಾದಾಗ, ತೊಂದರೆಯನ್ನು ನಿವಾರಿಸಲು ಆದೇಶದ ಮೂಲಕ ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಯಾವುದೇ ಕೃತ್ಯವನ್ನು ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ. ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ (ಪ್ರಭಾರ)
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.